**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | **:** | **ಮಲ್ಲಿಕಾರ್ಜುನ** | **ಚಾಸಾ-15** |
| **ತಂದೆಯ ಹೆಸರು** | **:** | **ರೇವಣಸಿದ್ದಪ್ಪ** | **ಪ್ರಾ.ಸಾ. 10** |
| **ವಯಸ್ಸು** | **:** | **53 ವರ್ಷ** | **ದಿನಾಂಕಃ 12-06-2023** |
| **ಉದ್ಯೋಗ** | **:** | **ವ್ಯವಸಾಯ** | |
| **ವಾಸಸ್ಥಳ** | **:** | **ರುದನೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಆರೋಪಿತರು ನನಗೆ ಗೊತ್ತು. ಚಾಸಾ-12 ರಿಂದ 14 ರವರು ನನಗೆ ಗೊತ್ತು. ಪ್ರಾಸಾ-1,2, ಮತ್ತು ಪ್ರಾಸಾ-4 ರವರು ನನಗೆ ಗೊತ್ತು.

ಈ ಪ್ರಕರಣದ ಜಗಳವಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಮದುವೆಯಾದ ಮೇಲೆ ಪ್ರಾಸಾ-3 ಮತ್ತು 1 ನೇ ಆರೋಪಿ ಜಗಳವಾಡಿದ್ದರು. ಅವರ ಮನೆಯಲ್ಲಿ ಬೇರೆ ಮನೆ ಮಾಡಬೇಕೆಂದು ಜಗಳವಾಡುತ್ತಿದ್ದರು. ಮದುವೆಯಾಗಿ 2-3 ತಿಂಗಳಾದ ಮೇಲೆ ಜಗಳವಾಡಿದ್ದಾರೆ.

1 ನೇ ಆರೋಪಿಯ ಮಾವ ನನಗೆ ಜಗಳವಾಡಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ ನಾನು ಜಗಳ ನೋಡಿಲ್ಲ. 1 ನೇ ಆರೋಪಿಯ ಮಾವ ಮನೋಹರ ಸ್ವಾಮಿರವರು 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ನಾನು ಮತ್ತು ಸದರಿ ಮನೋಹರ ಸ್ವಾಮಿ ಇಬ್ಬರು ಸೇರಿ 1 ನೇ ಆರೋಪಿ ಹಾಗೂ ಪ್ರಾಸಾ-3 ರವರಿಗೆ ಜಗಳವಾಡಬೇಡಿ ಎಂದು ತಿಳುವಳಿಕೆ ಹೇಳಿರುತ್ತೇವೆ. ಜಗಳವಾಡಿರುವ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ದಿನಾಂಕಃ 10-07-2016 ರಂದು 1 ನೇ ಆರೋಪಿ ಹಾಗೂ ಪ್ರಾಸಾ-3 ರವರ ಮದುವೆ ಆಗಿರುತ್ತದೆ ಎಂದರೆ ಸರಿ. ಮದುವೆ ಮಾಡುವ ಸಮಯದಲ್ಲಿ ಆರು ತೊಲೆ ಬಂಗಾರ ಎರಡು ಲಕ್ಷ ಹಣ ಹಾಗೂ ಗೃಹ ಉಪಯೋಗ ಸಾಮಾನುಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-14 ರವರು ಸೇಡಂನಲ್ಲಿ ಸಿಕ್ಕಾಗ ಪ್ರಾಸಾ-3 ರವರಿಗೆ ತವರು ಮನೆಯಿಂದ ಹಣ ಮತ್ತು ಬಂಗಾರ

ತೆಗೆದುಕೊಂಡು ಬರಲು 1 ಮತ್ತು 2 ನೇ ಆರೋಪಿತರು ಕಿರುಕುಳ ಕೊಡುತ್ತಿದ್ದರು ಎಂದು ತಿಳಿಸಿದರು ಎಂದರೆ ಸರಿಯಲ್ಲ. ದಿನಾಂಕಃ25-04-2017 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ರಾಯಕೋಡ ಗ್ರಾಮದಿಂದ ಚಾಸಾ-12, 14, ಪ್ರಾಸಾ-5, ಪ್ರಾಸಾ-7, ಚಾಸಾ-13 ರವರು ಎಲ್ಲರೂ ಕೂಡಿ ರುದನೂರ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಅವರೆಲ್ಲರೂ ಬಂದು ಚಾಸಾ-14 ನನಗೆ ಮತ್ತು ಚಾಸಾ-16 ರವರನ್ನು ಕರೆದುಕೊಂಡು 1 ನೇ ಆರೋಪಿಯ ಮನೆಗೆ ಹೋಗಿ ಪಂಚಾಯತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ 1 ಮತ್ತು 2 ನೇ ಆರೋಪಿತರಿಗೆ ನಾವು ಪ್ರಾಸಾ-3 ರವರಿಗೆ ನೀವು ತವರು ಮನೆಯಿಂದ ಹಣ ಮತ್ತು ಬಂಗಾರ ತೆಗೆದುಕೊಂಡು ಬಾ ಎಂದು ಹೇಳುವುದು ಸರಿಯಲ್ಲ ಎಂದು ಬುದ್ದಿವಾದ ಹೇಳಿರುತ್ತೇವೆ ಎಂದರೆ ಸರಿಯಲ್ಲ.

ನಂತರ ಪ್ರಾಸಾ-4 ರವರು ನನಗೆ ತಿಳಿಸಿದ್ದೇನೆಂದರೆ ದಿನಾಂಕ 11-10-2017 ರಂದು ಬೆಳಿಗ್ಗೆ 10.00 ಗಂಟೆಗೆ ರುದ್ದನೂರ ಗ್ರಾಮದ ತನ್ನ ಗಂಡನ ಮನೆಯಲ್ಲಿ ಯಾರು ಇಲ್ಲದಾಗ ನೇಳು ಹಾಕಿಕೊಂಡಿರುತ್ತಾಳೆ ಮತ್ತು ಪಕ್ಕದ ಮನೆಯ ಪ್ರಾಸಾ-1,2 ಹಾಗೂ ಪ್ರಾಸಾ-9 ರವರು ನೋಡಿ ಬಿಡಿಸಿರುತ್ತಾನೆ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ.

ಪ್ರಾಸಾ-3 ರವರಿಗೆ ಆರೋಪಿತರು ಮನೆಯಿಂದ ಬಂಗಾರ ಮತ್ತು ಹಣ ತೆಗೆದುಕೊಂಡು ಬಾ ಎಂದು ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಕಿರುಕುಳವನ್ನು ಸಹಿಸದೆ ನೇಣು ಹಾಕಿಕೊಂಡು ಆತ್ಮ ಹತ್ಯಗೆ ಪ್ರಯತ್ನಿ ಪಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಈ ರೀತಿ ನಾನು ದಿನಾಂಕಃ 14-10-2017 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ರೀತಿ ನನಗೆ ಘಟನೆಯ ಬಗ್ಗೆ ನನಗೆ ಮಾಹಿತಿ ಇದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ-4 ಮತ್ತು ಚಾಸಾ-14 ರವರು ನನಗೆ ಘಟನೆ ಬಗ್ಗೆ ಹೇಳಿದ್ದರೂ ಸಹ ಈ ದಿನ ನ್ಯಾಯಾಲಯದ ಮುಂದೆ ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್. ಎನ್.ಬಿ. ವಕೀಲರಿಂದಃ- ಇಲ್ಲ.**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**